ದಿಃ 29-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
**ಮುಂದುವರೆದ ಪಾಟೀ ಸವಾಲು ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಎನ್.ಕೆ. ರವರಿಂದಃ-**

**(ಸಾಕ್ಷಿಗೆ ಕನ್ನಡ ಭಾಷೆಯು ಬರದೆ ಇರುವುದರಿಂದ ಹಿಂದಿ ಭಾಷೆಯಲ್ಲಿ ಕೇಳಿದ ಪ್ರಶ್ನೆಗಳನ್ನು ಅರ್ಥೈಸಿಕೊಂಡು ಉಭಯ ಪಕ್ಷಗಾರರ ವಕೀಲರ ಉಪಸ್ಥಿತಿ ಮೇರೆಗೆ ತರ್ಜುಮೆ ಮಾಡಿ ಕನ್ನಡ ಭಾಷೆಯಲ್ಲಿ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲಾಯಿತು. ಕನ್ನಡ ಭಾಷೆಗೆ ತರ್ಜುಮೆ ಮಾಡಿ ನೀಡಿದ ಸಾಕ್ಷ್ಯವನ್ನು ದಾಖಲಿಸಿಕೊಳ್ಳಲು ಉಭಯ ಪಕ್ಷಗಾರರ ಪರ ವಕೀಲರು ಯಾವುದೇ ತಕರಾರು ಇಲ್ಲವೆಂದು ತಿಳಿಸಿರುತ್ತಾರೆ.)**

ನಿಪಿ-10 ರಲ್ಲಿ ನಿಪಿ-9 ರ ಬಗ್ಗೆ ಯಾವುದೇ ರೀತಿಯಾಗಿ ಅದರ ಉಲ್ಲೇಖ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ Approved layout ದಿನಾಂಕ 22.03.1990 ರಂದು ಆಗಿರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಅದೇ ಪ್ರಕಾರ ನಿಪಿ-10 ರಲ್ಲಿ ಪ್ಲಾನ್ ಸಂಖ್ಯೆ ಹಾಗೂ ಬುಡಾ ಸಂಖ್ಯೆಯನ್ನು ತೋರಿಸಲಾಗಿದೆ ಎಂದರೆ ಸರಿ. ನಾನು ನಿಪಿ-9 ನ್ನು ಈಗ ನೋಡಿದಾಗ ನಿಪಿ-10 ರಲ್ಲಿ ನಮೂದಿಸಿದ ಪ್ಯಾರಾ ನಂ.2 ರಲ್ಲಿ ನಮೂದಿಸಿದ ಬುಡಾ ಸಂಖ್ಯೆ ಮತ್ತು ಅದರ ದಿನಾಂಕ ಇರುವುದಿಲ್ಲ ಎಂದರೆ ಸರಿ. ನಿಪಿ-9 ರಲ್ಲಿ ದಿನಾಂಕ 29.01.1990 ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಪಿ-9 ರ ದಾಖಲೆಯು ನಿಪಿ-10 ರಲ್ಲಿ ನಮೂದಿಸಿ ದಾಖಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ನ್ನು ಒಬ್ಬರು ಕ್ಯೂ.ಎ.ರೆಹಮಾನ್ ರವರು ಕ್ರಯಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸರಿ. ನಿಪಿ-17 ನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಲಾಗಿದೆ ಎಂದು ನನಗೆ ಗೊತ್ತಿಲ್ಲ, ನಮ್ಮ ವಕೀಲರು ಹಾಜರು ಮಾಡಲು ತಿಳಿಸಿದ ಕಾರಣ ಹಾಜರುಪಡಿಸಿರುತ್ತೇನೆ. ನಿಪಿ-17 2017 ರ ಬೈಲಾ ಇರುತ್ತದೆ ಎಂದರೆ ಸಾಕ್ಷಿಯು ಅದು ಸೊಸೈಟಿ ಯಾವಾಗ ಪ್ರಾರಂಭವಾಗಿರುತ್ತದೆ, ಆಗಿನ ದಾಖಲೆ ಎಂದು ನುಡಿಯುತ್ತಾರೆ. ನಿಪಿ-17 ರಲ್ಲಿ 1990-91 ನೇ ಇಸವಿಯನ್ನು ನಮೂದಿಸಿರುವುದಿಲ್ಲ ಎಂದರೆ ಸರಿ.

ನಿಪಿ-19 ರ ಪ್ರಕಾರ ನಾನು 1988 ರಿಂದ 1995 ರವರೆಗಿನ ಆಡಿಟ್ ರಿಪೋರ್ಟ್ ನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿಪಿ-19 ರ ಪ್ಯಾರಾ ನಂ.38, ಪೇಜ್ ನಂ.15 ರಲ್ಲಿ 1988-89 ನೇ ಸಲುವಾಗಿ ಕಮಿಟಿಯನ್ನು ರಚಿಸಲಾಯಿತು ಎಂದರೆ ಸರಿ . ದಿನಾಂಕ 02.11.1988 ಕ್ಕೆ ಮಾನ್ಯ ಉಪ ನಿಬಂಧಕರು, ಸಹಕಾರಿ ಸಂಘ ರವರು ಸಂಚಾರಕ ಮಂಡಳಿ ಯನ್ನು ರದ್ದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಆದೇಶದ ಪ್ರಕಾರ ದಿನಾಂಕ 02.11.1988 ರಿಂದ 26.04.1990 ರವರೆಗೆ ಎಸ್.ಬಿ.ಅಮ್ಮಣ್ಣಗಿ, ಸೀನಿಯರ್ ಇನ್ಸಪೆಕ್ಟರ್ ರವರನ್ನು ಆಡಳಿತ ಅಧಿಕಾರಿ ಎಂದು ನೇಮಿಸಲಾಯಿತು ಎಂದರೆ ಸರಿ. ದಿನಾಂಕ 02.11.1988 ರಿಂದ 24.10.1994 ರವರೆಗೆ ಬೇರೆ ಬೇರೆ ಜನರನ್ನು ಆಡಳಿತ ಅಧಿಕಾರಿಗಳಾಗಿ ನೇಮಿಸಿ ಆದೇಶ ಹೊರಡಿಸಲಾಗಿತ್ತು ಎಂದರೆ ಸರಿ . ದಿನಾಂಕ 24.10.1994 ಕ್ಕೆ ಹೊಸ ಆಡಳಿತ ಮಂಡಳಿಯನ್ನು ನೇವಿಸಲಾಯಿತು ಎಂದರೆ ಸರಿ. ನಿಪಿ-10 ದಿನಾಂಕ 24.10.1990 ರ ಒಳಗಿನ ದಾಖಲೆಯಾಗಿರುತ್ತದೆ ಎಂದರೆ ಸರಿ. ಎಸ್.ಬಿ.ಅಮ್ಮಣ್ಣಗಿ ರವರು ಆಡಳಿತ ಅಧಿಕಾರಿಯಾಗಿರುವುದರಿಂದ ಅವರೇ ವ್ಯವಹಾರವನ್ನು ನೋಡಿಕೊಳ್ಳಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ . ದಿನಾಂಕ 02.11.1988 ರಿಂದ 24.10.1994 ರವರೆಗೆ ನಿಪಿ-10 ರ ಪ್ರಕಾರ ಯಾವುದೇ ಆಡಳಿತ ಮಂಡಳಿ ಇರಲಿಲ್ಲ ಎಂದರೆ ಸರಿ.

ವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ನಿಪಿ-10 ಆಗುವ ಸಮಯದಲ್ಲಿ ವಾದಿಯ ಗಂಡ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಕ್ಯೂ.ಎ.ರೆಹಮಾನ್ ರವರು ನಿಪಿ-10 ರ ವೇಳೆಯಲ್ಲಿ ಛೇರ್ಮನ್ ಆಗಿದ್ದರು ಎಂದು ತೋರಿಸಲು ಯಾವುದೇ ಕಾಗದ ಪತ್ರಗಳು ಇರುವುದಿಲ್ಲ. ನಿಪಿ-10 ನ್ನು ಬರೆದುಕೊಡುವವರು ಮತ್ತು ಬರೆಯಿಸಿಕೊಳ್ಳುವವರ

ಹೆಸರನ್ನು ಕ್ಯೂ.ಎ.ರೆಹಮಾನ್ ಎಂದು ಒಂದೇ ಹೆಸರನ್ನು ನಮೂದಿಸಲಾಗಿದೆ ಎಂದರೆ ಸರಿ. ವಾದಿಯು ದಾವಾ ಆಸ್ತಿಯಲ್ಲಿ ಯಾವತ್ತೂ ಕಬ್ಜೆಯಲ್ಲಿ ಇರದೆ ಇದ್ದರೂ ದಾಖಲೆಗಳನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ಖರೀದಿಸಿದ ಜಾಗೆಯಲ್ಲಿ ಮನೆ ಕಟ್ಟಿಕೊಂಡು ತೆರಿಗೆಯನ್ನು ಪಾವತಿ ಮಾಡಿಕೊಂಡು ಕಬ್ಜೆಯಲ್ಲಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಗೂ ಮತ್ತು 1 ನೇ ಪ್ರತಿವಾದಿಯ ಆಸ್ತಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ರಿಯಲ್ ಎಸ್ಟೇಟ್ ನ ವ್ಯವಹಾರ ಮಾಡುತ್ತಿದ್ದು 1 ನೇ ಪ್ರತಿವಾದಿಯಿಂದ ಹಣವನ್ನು ಹೊಡೆದುಕೊಳ್ಳಲು ಪ್ರತಿವಾದಿಯರ ವಿರುದ್ದ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರಗಳೂ ಗೊತ್ತಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**ಸಹಿ/-**

**3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**